81

## ಕರ್ನಾಟಕ ಸರ್ಕಾರ

## ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಬೆಂಗಳೂರು ಇವರು ಹೊರಡಿಸಿದ ನಡವಳಿಗಳು

ವಿಷಯ: ಮಾನ್ಯ ಸರ್ವೋಚ್ಛ ನ್ಯಾಯಾಲಯದ ಸಿವಿಲ್ ಅಪೀಲು ಸಂಖ್ಯೆ 2368/2011 ಪ್ರಕರಣದಲ್ಲಿ ದಿನಾಂಕ: 09-02-2017ರ ತೀರ್ಪಿನ ಹಿನ್ನೆಲೆಯಲ್ಲಿ ಗ್ರೂಪ್ 'ಡಿ' ವೃಂದದಲ್ಲಿ ಎಸ್.ಎಸ್.ಎಲ್.ಸಿ. ಉತ್ತೀರ್ಣರಾದ ಹಿರಿಯ ಮತ್ತು ಕಿರಿಯ ವೇತನ ಶ್ರೇಣಿ ರಕ್ಷಕ-ಜವಾನ ವೃಂದದ ನೌಕರರ ಪರಿಷ್ಕೃತ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಹೊರಡಿಸುವ ಬಗ್ಗೆ.

ಉಲ್ಲೇಖ:

1 ಸರ್ಕಾರದ ಅಧೀನ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವಾನಿಯಮ-1), ಸಿಆಸುಇ/ 182/ ಸೇನೆನಿ/2011, ದಿನಾಂಕ:06.05.2017.

2. ಗ್ರೂಪ್ 'ಡಿ' ವೃಂದದಲ್ಲಿ ಎಸ್.ಎಸ್.ಎಲ್.ಸಿ. ಉತ್ತೀರ್ಣರಾದ ಹಿರಿಯ ಮತ್ತು ಕಿರಿಯ ವೇತನ ಶ್ರೇಣಿ ರಕ್ಷಕ-ಜವಾನ ವೃಂದದ ನೌಕರರಿಗೆ ದ್ವಿತೀಯ ದರ್ಜೆ ಸಹಾಯಕರ ವೃಂದಕ್ಕೆ ಸ್ಥಾನಪನ್ನ ಮುಂಬಡ್ತಿ ಆದೇಶ ಸಂಖ್ಯೆ; ನಿಸಿದ್ವಿ/ಗ್ರೂಪ್ ಡಿ/ಮು/62/2013-14 ದಿನಾಂಕ:10.09.2015.

3. ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ದಿನಾಂಕ:21.05.2009ಕ್ಕೆ ಸಂಬಂಧಿಸಿದಂತೆ ಗ್ರೂಪ್ 'ಡಿ' ವೃಂದದಲ್ಲಿ ಎಸ್.ಎಸ್.ಎಲ್.ಸಿ. ಉತ್ತೀರ್ಣರಾದ ಹಿರಿಯ ಮತ್ತು ಕಿರಿಯ ವೇತನ ಶ್ರೇಣಿ ರಕ್ಷಕ-ಜವಾನ ವೃಂದದ ನೌಕರರ ಪರಿಷ್ಕೃತ ಜೇಷ್ಠತಾ ಪಟ್ಟಿ ಆದೇಶ ಸಂಖ್ಯೆ; ನಿಮಅಇ/ಜೇಷ್ಠತ-5/ಜವಾನ-ರಕ್ಷಕ/ಸಂಯು/13-14 ದಿನಾಂಕ: 10.10.2013.

4 ಗ್ರೂಪ್ 'ಡಿ' ವೃಂದದಲ್ಲಿ ಎಸ್.ಎಸ್.ಎಲ್.ಸಿ. ಉತ್ತೀರ್ಣರಾದ ಹಿರಿಯ ಮತ್ತು ಕಿರಿಯ ವೇತನ ಶ್ರೇಣಿ ರಕ್ಷಕ-ಜವಾನ ವೃಂದದ ನೌಕರರ ದಿನಾಂಕ 01.01.2015. ರಂದಿನಂತಿನ ಜೇಷ್ಠತಾ ಪಟ್ಟಿ ಆದೇಶ ಸಂಖ್ಯೆ;ಮಮಅಇ/ಜೇಷ್ಠತ/ಎಸ್.ಎಸ್.ಎಲ್.ಸಿ/ಗ್ರೂಪ್.ಡಿ/19/ 2015-16 ದಿನಾಂಕ:21.07.2015.

4. ಗ್ರೂಪ್ 'ಡಿ' ವೃಂದದಲ್ಲಿ ಎಸ್.ಎಸ್.ಎಲ್.ಸಿ. ಉತ್ತೀರ್ಣರಾದ ಹಿರಿಯ ಮತ್ತು ಕಿರಿಯ ವೇತನ ಶ್ರೇಣಿ ರಕ್ಷಕ-ಜವಾನ ವೃಂದದ ನೌಕರರ ದಿನಾಂಕ 01.01.2016. ರಂದಿನಂತಿನ ಜೇಷ್ಠತಾ ಪಟ್ಟಿ ಆದೇಶ ಸಂಖ್ಯೆ;ಮಮಅಇ/ಜೇಷ್ಠತ/ಎಸ್.ಎಸ್.ಎಲ್.ಸಿ/ಗ್ರೂಪ್.ಡಿ/26/ 2016-17 ದಿನಾಂಕ:07.12.2016.

ಪ್ರಸ್ತಾವನೆ: ಮಾನ್ಯ ಸರ್ವೋಚ್ಛ ನ್ಯಾಯಾಲಯವು ಸಿವಿಲ್ ಅಪೀಲು ಸಂಖ್ಯೆ 2368/2011 ಬಿ.ಕೆ. ಪವಿತ್ರ ಮತ್ತು ಇತರರ ವಿರುದ್ಧ ಯೂನಿಯನ್ ಆಫ್ ಇಂಡಿಯಾ ಪ್ರಕರಣದಲ್ಲಿ ದಿನಾಂಕ:09.02.2017 ರಂದು ನೀಡಿರುವ ತೀರ್ಪಿನಲ್ಲಿ ರಾಜ್ಯ ಸರ್ಕಾರದ ನಾಗರೀಕ ಸೇವೆಗಳನ್ನು "Karnataka Determination of Seniority of Govt servants promoted on the basis of Reservation Act 2002" ರ ಸೆಕ್ಷನ್ 3 ಮತ್ತು 4ನ್ನು ಸಂವಿಧಾನದ ಅನುಚ್ಛೇಧ 14 ಮತ್ತು 16 ನ್ನು ಅಧಿಕಾರಾತೀತ (ultra vires) ಎಂದು ಆದೇಶಿಸಿರುತ್ತದೆ.

ಈ ಹಿನ್ನೆಲೆಯಲ್ಲಿ ಉಲ್ಲೇಖ(1)ರ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಆದೇಶದಲ್ಲಿ ಸರ್ವೋಚ್ಛ ನ್ಯಾಯಾಲಯದ ತೀರ್ಪಿಗೆ ಅನುಗುಣವಾಗಿ ದಿನಾಂಕ: 27.04.1978 ರಿಂದ 01.01.2017 ರವರೆಗೆ ನೀಡಿರುವ ಮುಂಬಡ್ತಿಗಳಲ್ಲಿ ಪರಿಶಿಷ್ಠ ಜಾತಿ ಹಾಗೂ ಪರಿಶಿಷ್ಠ ಪಂಗಡ ನೌಕರರಿಗೆ ಮೀಸಲಾತಿ ಅನುಸರಿಸಿರುವ ಅಧಿಕಾರಿಗಳ/ನೌಕರರ ಜೇಷ್ಠತಾ ಪಟ್ಟಿಗಳನ್ನು ಪುನರ್‌ಪರಿಶೀಲಿಸಲು ಆದೇಶಿಸಲಾಗಿದೆ. ಅದರಂತೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ದಿನಾಂಕ: 27.04.1978 ರಿಂದ 01.01.2017 ರವರೆಗೆ ಹೊರಡಿಸಲಾಗಿರುವ ಅಧಿಕಾರಿ/ನೌಕರರ ಜೇಷ್ಠತೆ ಪುನರ್ ಪರಿಶೀಲಿಸಿ, ಪರಿಷ್ಕೃತ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಹೊರಡಿಸಬೇಕಿದೆ. ಪುನರ್‌ಪರಿಶೀಲನೆ ಕಾರ್ಯ ಕೈಗೊಳ್ಳಲು ಉಲ್ಲೇಖ(2)ರ ಮುಂಬಡ್ತಿ ಆದೇಶವನ್ನು, ಉಲ್ಲೇಖ (3)ರ ಪರಿಷ್ಕೃತ ಜೇಷ್ಠತಾ ಪಟ್ಟಿ ಹಾಗೂ ಇಲಾಖೆಯಲ್ಲಿ ಈ ಹಿಂದೆ ಪ್ರಕಟಿಸಲಾದ ಮತ್ತು ಲಭ್ಯವಿರುವ ಉಲ್ಲೇಖ (4) ಮತ್ತು (5)ರ ಅಂತಿಮ